ಶ್ರೀ ಕೆ. ಎಚ್. ಪಾಟೀಲ್.—ಈಗ ಆ ರೀತಿ ಇಲ್ಲ. ಹಿಂದೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ನೇರವಾಗಿ ಸಾಲ ಕೊಡಬಹುದಾಗಿತ್ತು. ಈಗ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಮೂಲಕ ಕೊಡುವ ವ್ಯವಸ್ಥೆ ಮಾಡಲಾಗಿದೆ. ಬಂದ ಅರ್ಜಿಗಳೆಲ್ಲಾ ಏಲೇ ಆಗಿವೆ, ೧೫ ದಿವಸಗಳಲ್ಲಿ ಕೇಳಿದವರಿಗೆಲ್ಲಾ ಕೊಟ್ಟು, ೩೦ ಟ್ರಾಕ್ಟರುಗಳು ಹೆಚ್ಚಾಗಿ ಉಳಿದಿವೆ.

ಶ್ರೀ ಬಾಪೂಗೌಡ ರಾಯಪ್ಪ—(ಎ) ಪ್ರಶ್ನೆಗೆ ಉತ್ತರವಾಗಿ ಟ್ರಾಕ್ಟರುಗಳ ಸರಬರಾಜಿಗೆ ೧೯೭೧—೭೨ರಲ್ಲಿ ೮೩೨ ಅರ್ಜಿಗಳು ಬಂದಿದ್ದುವು ಎಂದು ತಿಳಿಸಲಾಗಿದೆ. ಈ ಲೆಕ್ಕದ ಪ್ರಕಾರ ಟ್ರಾಕ್ಟರುಗಳನ್ನು ಖರೀದಿ ಮಾಡಲು ಜನರು ಮುಂದೆ ಹೆಚ್ಚಾಗಿ ಬರುತ್ತಿಲ್ಲ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.— ಪ್ರಶ್ನೆಗೆ ಉತ್ತರ ಕೊಟ್ಟ ತಾರೀಖಿನವರೆಗೆ ಆ ಸಂಖ್ಯೆ ನವಂಬರಾಗಿದೆ. ನಂತರ ಬೇಕಾದಷ್ಟು ಅರ್ಜಿಗಳು ಬಂದು ಎಲ್ಲರಿಗೂ ಟ್ರಾಕ್ಟರನ್ನು ಕೊಡುವ ವ್ಯವಸ್ಥೆ ಮಾಡಿದೆ.

ಶ್ರೀ ಟಿ. ಎಂ. ಮಂಜುನಾಥ.—ಈಗ ಫರ್ಗೂಸನ್ ಕಂಪೆನಿಯಿಂದ ಪಡೆದ ಟ್ರಾಕ್ಟರುಗಳಿಗೆ ಹೆಚ್ಚು ಹಣ ಪಾವತಿಮಾಡಿದ್ದಾರೆ. ಎಷ್ಟು ದಿವಸಗಳಲ್ಲಿ ಅದನ್ನು ಕಂಪೆನಿಯಿಂದ ವಾಪಸು ಕೊಡಿಸುತ್ತೀರಿ?

ಶ್ರೀ ಕೆ. ಹೆಚ್. ಪಾಟೀಲ್.— ಫರ್ಗೂಸನ್ ಟ್ರಾಕ್ಟರಿನ ವಿಚಾರದಲ್ಲಿ ಸರಕಾರ ನಿಯಂತ್ರಣ ಮಾಡುವುದಿಲ್ಲ. ಪರರಾಷ್ಟ್ರದಿಂದ ಬಂದ ಟ್ರಾಕ್ಟರುಗಳನ್ನು ಮಾತ್ರ ೪೫ ಎಚ್‌ಪಿ ಗಿಂತ ಹೆಚ್ಚಾಗಿರುವುದನ್ನು ಒಂದು ವರ್ಷ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಖರೀದಿಮಾಡಿದೆ. ಈ ವಿಚಾರದಲ್ಲಿ ತನಿಖೆ ನಡೆಯುತ್ತಿದೆ. ಕೇಂದ್ರ ಸರಕಾರದಿಂದ ಕೊಡಲು ಆಜ್ಞೆಯಾಗಬೇಕು. ಅವರು ಆರ್ಡರು ಮಾಡಿದನಂತರ ನಾವು ಅಪ್ಪಣೆ ಕೊಡುತ್ತೇವೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಭೂ ಸುಧಾರಣೆ ಜಾರಿಗೆ ಬಂದಾಗ ಟ್ರಾಕ್ಟರು ಉಪಯೋಗವಾಗುವುದಿಲ್ಲ. ಆದುದರಿಂದ ಆಗ ಅದನ್ನು ವಾಪಸು ಪಡೆಯುತ್ತೀರೋ ಅಥವ ಸಾಲ ಮಜಾ ಮಾಡುತ್ತೀರೋ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ.

SUPPLY OF MEDICINES, ETC., TO VETERINARY HOSPITALS

624 SRI GATTI CHNDRASHEKAR (Gubbi).—

Will the Minister of State for Animal Husbandry be pleased to state.—

(*a*) whether it has come to the notice of Government that the required medicine is not being supplied to veterinary hospitals in the State.

(*b*) whether it has come to their notice that instruments supplied to various hospitals 20–30 years ago have become useless and that no instruments are supplied recently.

(*c*) whether it has come to their notice that the amount sanctioned to this Department is being lapsed and any action is taken by them to solve this problem.

(*d*) whether it has come to their notice that the medicine amounting to 3 lakhs of rupees, purchased from the only company viz I.C.I. Company last year is being wasted without any use.

(e) whether Government intend to make arrangements to purchase the medicines of day to-day use from various companies instead of from only one Company?

SRI V. CHIKKE GOWDA.–Ministsr of State for Animal Husbandry

(a) It has come to the notice that adequate medicine is not supplied.

(b) Yes

(c) No considerable amount was lapsed so far out of the sanctioned amount in the estimates. So no action has been taken in the matter.

(d) Last year i.e. during 1971-72, medicines costing Rs. 6'678 85 only had been purchased from I.C.I Company. The medicine purchased so far are of essential use and are being utilised in all the hospitals.

(e) Yes. In the same manner, the medicines were purchased from the following companies during the year 1971–72.—

(1) Fizer Company
(2) Sarabhai Company
(3) I.C.I. Company
(4) Smith Clive and Company
(5) Hexite and Company
(6) Pure Pharma and Company
(7) Unity Pharms and Company
(8) Mysore Industrial Testing Laboratory

ಶ್ರೀ ಗಟ್ಟಿಚಂದ್ರಶೇಖರ್.—(ಅ) ಪ್ರಶ್ನೆಗೆ ಉತ್ತರವಾಗಿ ದನಗಳ ಆಸ್ಪತ್ರೆಗಳಿಗೆ ಬೇಕಾದ ಔಷಧಿ ಸರಬರಾಜು ಮಾಡುತ್ತಿರುವುದು ಗಮನಕ್ಕೆ ಬಂದಿದೆ ಎಂದು ತಿಳಿಸಲಾಗಿದೆ. ಹಾಗಿದ್ದಮೇಲೆ ಬೇಕಾದ ಔಷಧಿ ಸರಬರಾಜು ಮಾಡಲು ವ್ಯವಸೆ ಮಾಡುವಿರಾ?

ಶ್ರೀ ಎನ್. ಚಿಕ್ಕೇಗೌಡ.—ಈ ವರ್ಷ ೨೦ ಲಕ್ಷ ರೂಪಾಯಿಗಳ ಔಷಧಿ ಸರಬರಾಜು ಮಾಡಬೇಕೆಂದು ಬಜೆಟ್ಟಿನಲ್ಲಿ ಹಣ ಒದಗಿಸಲಾಗಿದೆ. ಈಗಾಗಲೆ ಇಂಡಸ್ಟ್ರಿಯಲ್ ಟೆಸ್ಟಿಂಗ್ ಲ್ಯಾಬೋರೇಟರಿಯಿಂದ ಸರಬರಾಯಿಮಾಡಲು ಏರ್ಪಾಡುಮಾಡಿದ್ದೇವೆ. ಬೇರೆ ಪೇಟೆಂಗ್ ಡ್ರಗ್ಸ್ ತರಿಸಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಸೂಕ್ತ ಏರ್ಪಾಡುಮಾಡಿ ಸಕಾಲದಲ್ಲಿ ಔಷಧಿ ಸರಬರಾಯಿಮಾಡಲು ವ್ಯವಸ್ಥೆಮಾಡುತ್ತೇವೆ.

ಶ್ರೀ ಗಟ್ಟಿಚಂದ್ರಶೇಖರ್.—೨೦–೩೦ ವರ್ಷಗಳಿಂದ ಸೂಜಿ, ದಬ್ಬಳ, ಸ್ಟಾವ್ ಮುಂತಾದುವು ಸರ್ಕಾರದಿಂದ ಏನೂ ಸರಬರಾಯಾಗಿವೆ ಅವನ್ನು ಅಧಿಕಾರಿಗಳು ಆಸ್ಪತ್ರೆಗಳಿಗೆ ಕೊಡದೆ ಮನೆಗಳಿಗೆ ಸಾಗಿಸಿದ್ದಾರೆ. ಇದನ್ನು ವಿಚಾರಿಸುತ್ತಿರಾ?

ಶ್ರೀ ಎನ್. ಚಿಕ್ಕೇಗೌಡ.—ಕಳೆದ ವರ್ಷ ಬಜೆಟ್ಟಿನಲ್ಲಿ ೨೦ ಲಕ್ಷ ಹಣ ಒದಗಿಸಿತ್ತು, ಆದರಲ್ಲಿ ೧,೩೬,೩೪೭ ರೂಪಾಯಿ ಖರ್ಚಾಗಿದೆ ಆಗ ಎಕಾನಮಿ ಮೆಷರ್ಸ್ ಬಂದುಸೇಕಡ ೧೦ ಭಾಗ ಅಂದರೆ ೫ ಲಕ್ಷ ೫೩ ಸಾವಿರ ರೂಪಾಯಿ ವಾಪಸು ಬಂತು, ಉಳಿ ಸಾವಿರ ರೂಪಾಯಿ ಸೇವಿಂಗ್ಸ್ ಆಗಿದೆ. ಕಳೆದ ವರ್ಷದ ಕೊನೆಗುಂಟ್ಲಿ ಎಕಾನಮಿ ಮೆಷರ್ಸ್ ಬಂದುದರಿಂದ ಮತ್ತು ಮಂಜೂರಾತಿ ದೊರೆಯದೆ ಕೊಂಡುಕೊಳ್ಳಲ್ಲಿಲ್ಲ. ಆದರೆ ಆಸ್ಪತ್ರೆಗಳಿಗೆ ಸರಿಯಾದ ಸಹಕರಣೆ ಕೊಡಬೇಕೆಂಬ ವಿಚಾರವಿದೆ. ಹೊಸ ಸಲಕರಣೆಗಳನ್ನು ಕೊಡಲು ಏರ್ಪಾಡುಮಾಡುತ್ತೇವೆ.